**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 816/2021</u>**

**ಪ್ರಾಸಾಃ- 16 ಚಾಸಾಃ- 32**

| | | |
|---|---|---|
| ಸಾಕ್ಷಿಯ ಹೆಸರು | : | ಜಿ.ಮಸ್ತಾನ್ |
| ತಂದೆಯ ಹೆಸರು | : | ಜಿ. ರಂಗಯ್ಯ |
| ವಯಸ್ಸು | : | 47 ವರ್ಷ |
| ವೃತ್ತಿ | : | ಟೈಲರ್ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 19.11.2024**

**<u>ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ</u>**

1. ಮೃತ ರಾಮಲಕ್ಷ್ಮಿ ಮತ್ತು ಅವರ ತಾಯಿ ನನಗೆ ಪರಿಚಯ. ಅವರು ನಮ್ಮ ಮನೆಯ ಹತ್ತಿರ ವಾಸವಾಗಿದ್ದರು. ಮೃತ ರಾಮಲಕ್ಷ್ಮಿ ಮತ್ತು ಜಯಮ್ಮ ಈಗ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅವರಿಬ್ಬರ ಕೊಲೆಯಾಗಿದ್ದು ನನಗೆ ಗೊತ್ತಿಲ್ಲ. ಆರೋಪಿತರ ಪರಿಚಯ ಇಲ್ಲ. ರಾಮಲಕ್ಷ್ಮಿ ಮತ್ತು ಜಯಮ್ಮ ಇವರನ್ನು ಆರೋಪಿತರು ಕೊಲೆ ಮಾಡಿದ್ದು ಗೊತ್ತಾಗಿರುತ್ತದೆ ಎಂದು ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ.

( **ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ** ).

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

2. ದಿಃ 16-7-2021 ರಂ ದು ತನಿಖಾಧಿಕಾರಿಯವರು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ರಾಮಲಕ್ಷ್ಮಿ ಮತ್ತು ಜಯಮ್ಮ ಇವರು ನಮ್ಮ ಮನೆಯ ಹತ್ತಿರ ವಾಸವಾಗಿದ್ದು ರಾಮಲಕ್ಷ್ಮಿ ಫೈನಾನ್ಸ್ ವ್ಯವಹಾರ ಮಾಡುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ಎರಡೂವರೆ ತಿಂಗಳ ಹಿಂದೆ ಶನಿವಾರ ಮದ್ಯಾಹ್ನ 2-30 ರ ಸುಮಾರಿಗೆ ಜಯಮ್ಮ ಮತ್ತು ರಾಮಲಕ್ಷ್ಮಿಯು ಬೆಳಗಲ್ ರಸ್ತೆ ಕಡೆಗೆ ನಡೆದುಕೊಂಡು ಹೋಗಿದ್ದನ್ನು ನಾನು ನೋಡಿರುತ್ತೇನೆ

ಎಂದರೆ ಸರಿಯಲ್ಲ. ನಂತರ 2-3 ದಿನಕ್ಕೆ ಅವರಿಬ್ಬರನ್ನು ಅವರ ಮಗಳು ವಿಚಾರಿಸಿದಾಗ ದೇವಸ್ಥಾನಗಳಿಗೆ ಹೋಗಿರಬಹುದು ಎಂದು ನಾನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಇದಾದ 15-20 ದಿನಗಳ ನಂತರ ಚಾಸಾ 1 ರವರು ಅವರಿಬ್ಬರು ಕಾಣೆಯಾದ ಬಗ್ಗೆ ದೂರು ದಾಖಲಿಸಿದರು ಎಂದರೆ ನನಗೆ ಗೊತ್ತಿಲ್ಲ. ನಂತರ 1 ನೇ ಆರೋಪಿಯು ರಾಮಲಕ್ಷ್ಮಿಯ ಬಳಿ ರೂ. 1 ಲಕ್ಷ ಸಾಲ ಪಡೆದು ಅದಕ್ಕೆ ರೂ. 2 ಲಕ್ಷ ಬಡ್ಡಿ ಆಗಿದ್ದು ಒಟ್ಟು ರೂ. 3 ಲಕ್ಷ ಹಿಂದುರಿಗಿಸುವಂತೆ ರಾಮಲಕ್ಷ್ಮಿಯು ಆತನನ್ನು ಕೇಳಿದಾಗ ದಿಃ 20-3-2021 ರಂದು ಮದ್ಯಾಹ್ನ 2-30 ರ ಸುಮಾರಿಗೆ ರಾಮಲಕ್ಷ್ಮಿ ಮತ್ತು ಜಯಮ್ಮಳನ್ನು ಕಾರಿನಲ್ಲಿ ಅಪರಿಸಿಕೊಂಡು ಉಳಿದ ಆರೋಪಿತರ ಸಹಾಯದಿಂದ ದಿಃ 21-3-2021 ರಂದು ರಾತ್ರಿ 9-30 ರ ಸುಮಾರಿಗೆ ಸಿರಿಗೇರಿ ಹತ್ತಿರ ದಾಸಾಪುರ ಕ್ರಾಸ್ ಎಲ್ ಎಲ್ ಸಿ ಕೆನಾಲ್ ಬಳಿ ಅವರಿಬ್ಬರನ್ನು ಕಬ್ಬಿಣದ ರಾಡಿನಿಂದ ತಲೆಗೆ ಹೊಡೆದು ಆರೋಪಿತರು ಅವರನ್ನು ಕಾಲುವೆ ನೀರಿಗೆ ಹಾಕಿ ಕೊಲೆ ಮಾಡಿ ಜೈಲಿನಲ್ಲಿ ಇರುವ ವಿಷಯ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-55 ಎಂದು ಗುರುತಿಸಲಾಯಿತು. ನಿಪಿ-55 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಪಿ ಮತ್ತು ಎಸ್ ಆರ್ ಎಸ್ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 816/2021</u>**

**ಪ್ರಾಸಾಃ- 17 ಚಾಸಾಃ- 37**

| | | |
|---|---|---|
| ಸಾಕ್ಷಿಯ ಹೆಸರು | : | ಹೇಮಲತಾ |
| ಗಂಡನ ಹೆಸರು | : | ಮಲ್ಲಯ್ಯ |
| ವಯಸ್ಸು | : | 29 ವರ್ಷ |
| ವೃತ್ತಿ | : | ಇಸ್ತ್ರಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 19.11.2024**

**<u>ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ</u>**

1. ಆರೋಪಿ 1 ನನ್ನ ಗಂಡ. ರಾಮಲಕ್ಷ್ಮಿ ಮತ್ತು ಜಯಮ್ಮ ಇವರ ಪರಿಚಯ ಇರುವುದಿಲ್ಲ. ರಾಮಲಕ್ಷ್ಮಿಯು ಫೈನಾನ್ಸ್ ಮಾಡುತ್ತಿದ್ದು ಅವರ ಬಳಿ ನನ್ನ ಗಂಡ ಸಾಲ ಪಡೆದಿರುವುದಿಲ್ಲ. ಅವರಿಬ್ಬರ ಕೊಲೆ ಕಾರಣಕ್ಕೆ ನನ್ನ ಗಂಡ ಮತ್ತು ಆತನ ಸ್ನೇಹಿತರು ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. 2 ವರ್ಷಗಳ ಹಿಂದೆ ಪೋಲೀಸರು ನಮ್ಮ ಮನೆಯ ಬಳಿ ಪಂಚನಾಮೆ ಮಾಡಲು ಬಂದಿದ್ದರು. ಸಾಕ್ಷಿಯು ದಿಃ 16-6-2021 ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ-56 ಎಂದು, ಸಾಕ್ಷಿಯ ಸಹಿಯನ್ನು ನಿಪಿ-56(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮನೆಯ 2 ಪೋಟೋಗಳನ್ನು ತೋರಿಸಲಾಗಿ ಅವುಗಳು ತಮ್ಮ ಮನೆಯ ಪೋಟೋಗಳು ಎಂದು ಗುರುತಿಸಿದ ಮೇರೆಗೆ ಸದರಿ ಪೋಟೋಗಳನ್ನು ನಿಪಿ-57 ಮತ್ತು ನಿಪಿ-58 ಎಂದು ಗುರುತಿಸಲಾಯಿತು.

( **ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ** ).

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

2. 1 ನೇ ಆರೋಪಿಯು ಮೃತ ರಾಮಲಕ್ಷ್ಮಿ ಜೊತೆಗೆ ಹಣ ಸಾಲ ತೆಗೆದುಕೊಳ್ಳುವುದು ಕೊಡುವುದು ವ್ಯವಹಾರ ಮಾಡುತ್ತಿದ್ದ ಎಂದರೆ ಗೊತ್ತಿಲ್ಲ. ಸದರಿ ಹಣವನ್ನು ನನ್ನ ಗಂಡ ಮರಳಿ ಕೊಡದ ಕಾರಣ ಮೃತರಿಬ್ಬರೂ ಆತನನ್ನು ಬೈಯುತ್ತಿದ್ದರು ಆ ಕಾರಣ ನನ್ನ ಗಂಡ ಅವರ ಮೇಲೆ ದ್ವೇಷ ಇಟ್ಟುಕೊಂಡು ಉಳಿದ ಆರೋಪಿತರ ಜೊತೆ ಸೇರಿ ಅವರಿಬ್ಬರನ್ನೂ ಕೊಲೆ ಮಾಡಿರುತ್ತಾನೆ ಎಂದು ಪೋಲೀಸರಿಂದ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-59 ಎಂದು ಗುರುತಿಸಲಾಯಿತು. ನಿಪಿ-59 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿಯು ನನ್ನ ಗಂಡನಾದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಪಿ ಮತ್ತು ಎಸ್ ಆರ್ ಎಸ್ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ವಿಶೇಷ ನ್ಯಾಯಾಲಯ, ಬಳ್ಳಾರಿ.**